ಓ.ಎಸ್ಃ 460/2013

ಡಿ. ಡಬ್ಲ್ಯೂ ಃ 01

**<u>ಸಾಕ್ಷಿಗೆ ದಿನಾಂಕ 11.02.2019 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಮು. ಪಾಟೀಸವಾಲುಃ ವಾದಿ ಪರ ಶ್ರೀಎನ್.ಕೆ.ಎಸ್ ವಕೀಲರಿಂದ</u>**

ನಾನು ಈಗ ನೋಡುತ್ತಿರುವ ನಿಡಿ 1 ರ ಫೋಟೋದಲ್ಲಿನ ಸ್ಥಳದ ಪಶ್ಚಿಮ ದಿಕ್ಕಿಗೆ ರಮೇಶ್ ರವರ ಮನೆ ಇದೆ ಎಂದರೆ ಹೌದು. ಸದರಿ ಮನೆಯನ್ನು 3-4 ವರ್ಷಗಳಲ್ಲಿ ಕಟ್ಟಿದ್ದಾರೆ. ನಿಡಿ 3 ರ ಫೋಟೋದಲ್ಲಿನ ಸ್ಥಳದ ಸುತ್ತಲು ವಾದಿ ತಂತಿಬೇಲಿ ಹಾಕಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾವು ಬೇಲಿ ಹಾಕಿರುತ್ತೇವೆ. ನಿಡಿ 1 ರ ಫೋಟೋದಲ್ಲಿನ ಸ್ಥಳದ ದಕ್ಷಿಣಕ್ಕೆ ನಮ್ಮ ವಾಸದ ಮನೆ ಇದೆ. ಸದರಿ ನಮ್ಮ ಮನೆಯ ಕೊನೆಯ ಭಾಗದಲ್ಲಿ ಕಲ್ಲನ್ನು ನೆಟ್ಟಿಲ್ಲ. ನಮ್ಮ ಮನೆಯಿಂದ ನಿಡಿ 1 ರಲ್ಲಿ ಕಾಣುವ ಗೇಟ್ ಗೆ ಸುಮಾರು 80 ಅಡಿ ಅಂತರವಿದೆ. ಸದರಿ 80 ಅಡಿ ಜಾಗ ನನಗೆ ಸೇರಿರುತ್ತದೆ. ಸದರಿ ಜಾಗವನ್ನು ಸೋಮೇಗೌಡ ರವರಿಂದ ಖರೀದಿ ಮಾಡಿರುತ್ತೇನೆ. ಸದರಿ ಕ್ರಯ ಪತ್ರದ ಮೂಲಕ 120 ಇಂಟು 80 ಅಡಿ ವಿಸ್ತೀರ್ಣದ ಆಸ್ತಿಯನ್ನು ಖರೀದಿಸಿರುತ್ತೇನೆ. ಸದರಿ ವಿಸ್ತೀರ್ಣಕ್ಕೆ ಖಾತೆಯಾಗಿದೆ. ಸದರಿ ಕ್ರಯ ಪತ್ರದಲ್ಲಿ ಉತ್ತರ ಕ್ಕೆ ರಸ್ತೆ ಇದೆ ಎಂದು ಬರೆದಿಸಿದ್ದೇನೆ. ಆ ಸಮಯದಲ್ಲಿ ಆಸ್ತಿಯನ್ನು ಅಳತೆ ಮಾಡಿ ಖರೀದಿಸಿದ್ದೇನೆ. ಸದರಿ ದಾಖಲೆಗಳನ್ನು ಹಾಜರುಮಾಡಿಲ್ಲ. ಉತ್ತರ ದಿಕ್ಕಿಗೆ ರಸ್ತೆ ಇರುವ ಬಗ್ಗೆ ಅಳತೆ ಮಾಡಿಸಿದ್ದೇನೆ. ಸದರಿ ರಸ್ತೆ 30 ಅಡಿ ಇದೆ. ಒಟ್ಟು ವಿಸ್ತೀರ್ದಲ್ಲಿ ನಾನು 30

ಇಂಟು 30 ಮತ್ತು 30 ಇಂಟು 40 ಅಡಿ ವಿಸ್ತೀರ್ಣಗಳಲ್ಲಿ ಎರಡು ಮನೆ ಕಟ್ಟಿದ್ದೇನೆ. ಸದರಿ ಮನೆ ಕಟ್ಟಿದ ಬಗ್ಗೆ ಪರವಾನಿಗೆಯನ್ನು ಹಾಜರುಮಾಡಿಲ್ಲ. ಅದೇ ರೀತಿ ಪರವಾನಿಗೆಯನ್ನು ಪಡೆದಿಲ್ಲ. ನಾನು ಸೋಮೇಗೌಡನಿಂದ ಖರೀದಿಸಿದ ಆಸ್ತಿಯ ವಿಸ್ತಿರ್ಣವನ್ನು ನನ್ನ ಲಿಖಿತ ಹೇಳಿಕೆಯಲ್ಲಿ ಬರೆಸಿಲ್ಲ. ಕ್ರಯ ಪತ್ರ ನಮೂನೆ 9, 11, ಖಾತೆಯ ದಾಖಲೆಗಳನ್ನು ಹಾಜರುಮಾಡಿದ್ದೇನೆ.

ವಾದಿ ಮತ್ತು ಆತನ ತಾಯಿ ಮೋಸದಿಂದ ನನಗೆ ಸೇರಿದ ಆಸ್ತಿಯನ್ನು ಖಾತೆ ಮಾಡಿಸಿಕೊಂಡಿರುತ್ತಾರೆ ಎಂದು ಕಂದಾಯ ಇಲಾಖೆಯಲ್ಲಿ ಯಾವುದೇ ಪ್ರಕರಣ ದಾಖಲಿಸಿಲ್ಲ. ನಾನು ವಾದಿ ಕಟ್ಟುತ್ತಿದ್ದ ಮನೆಗೆ ತೊಂದರೆ ನೀಡಿರುತ್ತೇನೆ ಎಂದು ನನ್ನ ವಿರುದ್ದ ವಾದಿ ದೂರು ನೀಡಿರುತ್ತಾರೆ ಎಂದರೆ ಹೌದು. ನಾನು ವಾದಿ ಮತ್ತು ಇತರರ ವಿರುದ್ದ ಕೆ.ಆರ್.ಎಸ್ ಪೋಲಿಸ್ ಠಾಣೆಯಲ್ಲಿ ನೀಡಿದ ದೂರು ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ವಜಾ ಆಗಿರುತ್ತದೆ ಎಂದರೆ ಹೌದು. ನಾನು ನಾರಾಯಣ ರವರ ಮಗ ಶ್ರೀನಿವಾಸ್ ಎಂಬುವವರ ವಿರುದ್ದ ದಾವೆ ಸಲ್ಲಿಸಿದ್ದೇನೆ ಎಂದರೆ ಹೌದು. ದಾವಾ ಆಸ್ತಿಯ ಪೂರ್ವ ದಿಕ್ಕಿನಲ್ಲಿ ಸದರಿ ನಾರಾಯಣ ರವರ ಆಸ್ತಿ ಇದೆ ಎಂದರೆ ಸುಳ್ಳು. ದಾವಾ ಆಸ್ತಿ ನನಗೆ ಸೇರಿರುತ್ತದೆ ಎಂದು ತೋರಿಸಲು ಕ್ರಯ ಪತ್ರ ಮತ್ತು ಫೋಟೋವನ್ನು ಹಾಜರುಮಾಡಿದ್ದೇನೆ. ವಾದಿಗಳಿಗೆ ದಾವಾ ಆಸ್ತಿ ಸೇರಿರುವುದಿಲ್ಲ ಎಂದು ಯಾವುದೇ ನೋಟಿಸ್ ನೀಡಿಲ್ಲ ಗಲಾಟೆ ಮಾಡಿದ್ದೇನೆ. ದಾವಾ ಆಸ್ತಿ ವಾದಿ ಮತ್ತು ಆತನ ತಾಯಿಗೆ ಸೇರಿದ್ದು ಅದನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ತಕರಾರನ್ನು ಸಲ್ಲಿಸಿರುತ್ತೇನೆ ಎಂದರೆ

ಸರಿಯಲ್ಲ.  ನಾನು ಕಟ್ಟಿಕೊಂಡು ವಾಸ ಇರುವ ಮನೆಗಳ ಪ್ರದೇಶ ಮಾತ್ರ ನನಗೆ ಸೇರಿದ್ದು ನಿಡಿ 1 ರ ಫೋಟೋದಲ್ಲಿ ಕಾಣುವ ಖಾಲಿ ಜಾಗ ನನಗೆ ಸೇರಿದಲ್ಲ ಎಂದರೆ ಸರಿಯಲ್ಲ. ನಾನು ಹಾಜರುಮಾಡಿರುವ ಪೋಟೋಗಳಲ್ಲಿ ನನಗೆ ಸೇರಿದ ಮನೆಗಳು ಕಾಣಿಸುತ್ತಿಲ್ಲ ಎಂದರೆ ಹೌದು.  ನನ್ನ ಮನೆಗಳ ಪೋಟೋ ಹಾಜರುಮಾಡಲು ತೊಂದರೆ ಇಲ್ಲ.  1992 ರಲ್ಲಿಯೇ ರಮೇಶ್ ರವರು ಮನೆ ಕಟ್ಟಿದ್ದು ಈಗ್ಗೆ 2-3 ವರ್ಷಗಳ ಹಿಂದೆ ಮನೆ ಕಟ್ಟಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ನಾನು ವಾದಿಗಳ ವಿರುದ್ದ ಅಟ್ರಾಸಿಟಿ ಪ್ರಕರಣ ದಾಖಲಿಸಿದ್ದೆ ಎಂದರೆ ಹೌದು.  ಅದು ಮಂಡ್ಯ ನ್ಯಾಯಾಲಯದಲ್ಲಿ ವಜಾ ಆಗಿರುತ್ತದೆ ಎಂದರೆ ಗೊತ್ತಿಲ್ಲ.  ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು , ಅಧಿಕಾರ ಮತ್ತು ಸ್ವಾದೀನ ಇರುವುದಿಲ್ಲ, ವಾದಿಗೆ ಸೇರಿರುತ್ತದೆ ಎಂದರೆ ಸುಳ್ಳು. ದಾವಾ ಆಸ್ತಿಯ ಪೂರ್ವಕ್ಕೆ ಇರುವ ಶಿವಣ್ಣನ ಹುಲ್ಲು ಹಿತ್ತಲನ್ನು ನಾನೇ ಖರೀದಿಸಿರುತ್ತೇನೆ.  ದಾವಾ ಆಸ್ತಿಗೆ ವಾದಿಯೇ ಮಾಲೀಕರಾಗಿರುತ್ತಾರೆ ಎಂದರೆ ಸರಿ .

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಓ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ